ಇಂದು ದಿನಾಂಕಃ 23.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ** ಪ್ರತಿವಾದಿಯ ಪರ ಶ್ರೀ ಡಿ ಟಿ ಟಿ ವಕೀಲರಿಂದಃ

ನಾನು ಮದುವೆಗಿಂತ ಪೂರ್ವದಲ್ಲಿ ಕೆಲವರಕೊಪ್ಪದಲ್ಲಿ ವಾಸವಾಗಿದ್ದೆ ಎಂದರೆ ಸರಿ. ಆ ರೀತಿ ನಾನು ಕೆಲವರಕೊಪ್ಪದಲ್ಲಿ ವಾಸವಾಗಿದ್ದ ಕಾರಣದಿಂದ ನನಗೆ ಡಮ್ಮಳಿಯಲ್ಲಿ ಅಷ್ಟು ವಹಿವಾಟು ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಅಣ್ಣನಾದ ಹನುಮಂತಪ್ಪ ರವರು ಕಾಫೀ ಸೀಮೆಗೆ ದುಡಿಯಲು ಹೋಗುತ್ತಿದ್ದರು ಎಂದರೆ ಸರಿ. ನಾವು ಆ ರೀತಿ ಬೇರೆ ಬೇರ ಊರುಗಲಲ್ಲಿ ಇದ್ದ ಕಾರಣದಿಂದ ನಾವು ಡಮ್ಮಳ್ಳಿಯಲ್ಲ ವಹಿವಾಟು ಮಾಡುತ್ತಿರಲಿಲ್ಲ ಎಂದರೆ ಸಾಕ್ಷಿಯು ನನ್ನ ತಂಗಿಯ ಮದುವೆ ಖರ್ಚು ವೆಚ್ಚಗಳ ಸಾಲವನ್ನು ತೀರಿಸುವ ಸಲುವಾಗಿ ನಾವು ಬೇರೆ ಬೇರೆ ಊರುಗಳಿಗೆ ಹೋಗಿ ಕೆಲಸ ಮಾಡಿದ್ದು, ಸಾಲ ತೀರಿದ ನಂತರ ನಾವು ಡಮ್ಮಳ್ಳಿಯಲ್ಲಿಯೇ ಬಂದು ವಾಸವಾಗಿರುತ್ತೇವೆ ಎಂದು ನುಡಿದಿರುತ್ತಾರೆ. ನನ್ನ ತಂಗಿ ಎಂದರೆ ಶಾಂತವ್ವ ಹಾಗೂ ಅಡಿವೆಪ್ಪನ ಮಗಳ ಮದುವೆಯಾಗಿರುತ್ತವೆ. ಈ ಬಗ್ಗೆ ನಾನು ನನ್ನ ವಾದ ಪತ್ರದಲ್ಲಿ ಹೇಳಿ ಬರೆಸಿರುವುದಿಲ್ಲ.

2. ನನ್ನ ತಂದೆ ಜೀವಂತವಾಗಿರುವಾಗಲೇ ಡ.ನಂ. 1036 ರ ಪ್ರಕಾರ ಸರ್ವೆನಂ. 68, 68/3, 68/2, 68/3 ಎ, ರ ಆಸ್ತಿಗಳಿಗೆ ಸಂಬಂದಿಸಿದಂತೆ ಪಾಲು ಪಟ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಸದರಿ ಪಾಲು ಪಟ್ಟಿಯಂತೆ ನನಗೆ 2 ಎಕರೆ ಜಮೀನು, ನನ್ನ ಅಣ್ಣನಾದ ಹನುಮಂತಪ್ಪನಿಗೆ 2 ಎಕರೆ ಜಮೀನು, 1 ನೇ ಪ್ರತಿವಾದಿಯಾದ ಪಕ್ಕೀರಪ್ಪನಿಗೆ 1 ಎಕರೆ 36 ಗುಂಟೆ ಜಮೀನು ಬಂದಿರುತ್ತದೆ ಎಂದರೆ ಸರಿ. ಸದರಿ ವಾಟ್ನಿಯ ಪ್ರಕಾರ ನಮ್ಮ ನಮ್ಮ ಪಾಲಿಗೆ ಬಂದಂತಹ ಜಮೀನುಗಳಿಗೆ ನಾವು ಪ್ರತ್ಯೇಕವಾಗಿ ಖಾತೆ ಮಾಡಿಸಿಕೊಂಡು, ಪಹಣಿ ಪತ್ರಿಕೆಗಳಲ್ಲಿ ನಮ್ಮ ಹೆಸರುಗಳು ಪ್ರತ್ಯೇಕವಾಗಿ ನಮೂದಿಸಿಕೊಂಡಿರುತ್ತೇವೆ ಎಂದರೆ ಸರಿ.

3. ಹನುಮಂತಪ್ಪ ರವರಿಗೆ ಬಂದಂತಹ 2 ಎಕರೆ ಜಮೀನನ್ನು ಆತ ಮೃತ ಪಟ್ಟ ನಂತರ ಆತನ ಹೆಂಡತಿಯಾದಂತಹ ಪ್ರತಿವಾದಿ 6 ರವರ ಹೆಸರಿಗೆ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ಸರಿಯಲ್ಲ. ಆ ರೀತಿ ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಡಮ್ಮಳ್ಳಿಯಲ್ಲಿ ವಾಸವಾಗಿಲ್ಲದಿದ್ದ ಕಾರಣದಿಂದ ನನ್ನ ತಂದೆ 1 ನೇ ಪ್ರತಿವಾದಿಯಾದ ಪಕ್ಕೀರಪ್ಪ ರವರ ಮನೆಯಲ್ಲಿ ವಾಸವಾಗಿದ್ದರು ಎಂದರೆ ಸರಿ. ಆ ಸಮಯದಲ್ಲಿ 1 ನೇ ಪ್ರತಿವಾದಿಯೇ ನಮ್ಮ ತಂದೆಯ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿ 2 ರಿಂದ 5 ರವರಿಗೆ ತನ್ನ ಅಜ್ಜನ ಮೇಲೆ ಅತಿಯಾದ ಪ್ರೀತಿ ಇದ್ದ ಕಾರಣದಿಂದ ಅವರನ್ನು ಪ್ರೀತಿಯಿಂದ ಹಾಗೂ ಆರೋಗ್ಯವನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ.

4. ಆ ರೀತಿ ನಾನು ಮತ್ತು ಹನಮಂತಪ್ಪ ರವರು ನಮ್ಮ ತಂದೆಯನ್ನು ನೋಡಿಕೊಳ್ಳದೇ ಇದ್ದ ಕಾರಣದಿಂದ ನನ್ನ ತಂದೆ ತನ್ನ ಸ್ವಂತ ಆಸ್ತಿಯನ್ನು ಪ್ರತಿವಾದಿ 1 ರಿಂದ 5 ರವರಿಗೆ ಮೃತ್ಯು ಪತ್ರದ ಮೂಲಕ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ತಂಗಿಯರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ನಾವು ನಮ್ಮ ತಂಗಿಯರಿಗೆ ಕೊಡುವುದನ್ನು ಕೊಟ್ಟು ನಂತರ ನಾವು ಡಮ್ಮಳಿಗೆ ಬಂದು ಸೇರಿಕೊಂಡು ನಾವು ವಹಿವಾಟನ್ನು ಮಾಡಿಕೊಂಡು ಹೋಗಿರುತ್ತೇವೆ ಎಂದು ನುಡಿದಿರುತ್ತಾರೆ. ನನ್ನ ತಂದೆ ಪ್ರತಿವಾದಿ 5 ರವರಿಗೆ ಮೃತ್ಯು ಪತ್ರ ಮಾಡಿಕೊಟ್ಟಿರುವ ಬಗ್ಗೆ ನನಗೆ ಸುಮಾರು 12 ವರ್ಷಗಳ ಹಿಂದೆ ಗೊತ್ತಾಗಿರುತ್ತದೆ. ಆ ರೀತಿ ನನಗೆ ಗೊತ್ತಾದ ನಂತರ ಸದರಿ ಮೃತ್ಯು ಪತ್ರದ ಮೇಲೆ ನಾನು ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲ.

**ಪಾಟೀ ಸವಾಲುಃ** ಪ್ರತಿವಾದಿ 7 ರಿಂದ 10 ರವರ ಪರ ಶ್ರೀ ಎನ್ ವಿ ಪಿ ವಕೀಲರು ಇಲ್ಲಾ ಎಂದು ನುಡಿದಿರುತ್ತಾರೆ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.